# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

**ಸಿ.ಸಿ. ನಂ: 90/2018** **ಪಿ.ಡಬ್ಲ್ಯೂ: 1**

**ಸಿಡಬ್ಲೂ: 1**

ಸಾಕ್ಷಿದಾರರ ಹೆಸರು : ವಿನೋದಕುಮಾರ

ತಂದೆಯ ಹೆಸರು : ಶೇಷು ಕುಂದಾರ

ವಯಸ್ಸು : 69 ವರ್ಷ

ಉದ್ಯೋಗ : ನಿವೃತ್ತ ಅಬಕಾರಿ ಉಪನಿರೀಕ್ಷಕರು

ವಾಸ್ತವ್ಯ : ಸುರತ್ಕಲ್ , ಮಂಗಳೂರು

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ: 14-08-2025.**

## ಮುಖ್ಯ ವಿಚಾರಣೆ: ಎ ಪಿ ಪಿ ಯವರಿಂದ:

ನಾನು 2009 ರಿಂದ 2016 ರ ವರೆಗೆ ಕಾರವಾರದ ಮಾಜಾಳಿ ಅಬಕಾರಿ ತನಿಖಾ ಠಾಣೆಯಲ್ಲಿ ಅಬಕಾರಿ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 09.06.2011 ರಂದು ರಾತ್ರಿ ಸುಮಾರು 9.15 ಕ್ಕೆ ತನಿಖಾ ಠಾಣೆಯಲ್ಲಿ ನಾನು ಸಿಬ್ಬಂದಿಗಳೊಂದಿಗೆ ವಾಹನ ತಪಾಸಣೆ ಮಾಡುತ್ತಿರುವಾಗ ಗೋವಾ ಕಡೆಯಿಂದ ಸ್ಯಾಂಟ್ರೋ ಕಾರ ನೋಂದಣಿ ಸಂಖ್ಯೆ ಜಿಎ-08-ಎಚ್-6897 ನೇ ನಂಬರಿನ ಗಾಡಿ ಬಂದಿದ್ದು, ಸದರಿ ವಾಹನದಲ್ಲಿ ಗೋವಾ ರಾಜ್ಯದ ಮದ್ಯವನ್ನು ಕರ್ನಾಟಕಕ್ಕೆ ಅಕ್ರಮವಾಗಿ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸದರಿ ಗಾಡಿಯನ್ನು ತಡೆದು ನಿಲ್ಲಿಸಿ ಆತನ ಹೆಸರನ್ನು ಕೇಳಲಾಗಿ ಆತನು ಮೊಹಮ್ಮದ ಷರೀಫ್ ಬುಕಾರಿ ಎಂದು ತಿಳಿಸಿದ್ದು , ಡ್ರೈವರ ಸೀಟಿನ ಪಕ್ಕದಲ್ಲಿ ಕುಳಿತ ವ್ಯಕ್ತಿಯು ತನ್ನ ಹೆಸರನ್ನು ಹಸೀಮ ಹಮೀದ ಎಂದು ಹೇಳಿದ್ದು, ಅವರಲ್ಲಿ ಗಾಡಿಯಲ್ಲಿ ಏನಿದೆ ಎಂದು ಕೇಳಲಾಗಿ ಆವರು ಗಾಡಿಯಲ್ಲಿ ಏನಿಲ್ಲಾ ಎಂದು ತಿಳಿಸಿದ್ದು, ನಂತರ ಗಾಡಿಯಲ್ಲಿ ಹೋಗುತ್ತಿದ್ದ ಚಾಸಾ.2 ಮತ್ತು 3 ಪಂಚರನ್ನು ಈ ಪ್ರಕರಣದಲ್ಲಿ ಪಂಚರಾಗುವಂತೆ ಕೋರಿದ್ದು, ಅವರು ಒಪ್ಪಿದ್ದರಿಂದ ಸದರಿ ಗಾಡಿಯನ್ನು ತಪಾಸಣೆ ಮಾಡಿದ್ದು , ಸದರಿ ಗಾಡಿಯ ಒಳಗೆ 6 ಪಾಲಿಥೀನ ಬ್ಯಾಗ ಚೀಲಗಳು ಕಂಡು ಬಂದಿದ್ದು, ಅದನ್ನು ತಪಾಸಣೆ ಮಾಡುವ ಸಲುವಾಗಿ ಬಿಚ್ಚಿ ನೋಡಿದ್ದು, ಅದರ ಒಳಗಡೆ ತಲಾ 100 ರಂತೆ ಎಲ್ಲಾ 6 ಬ್ಯಾಗುಗಳಲ್ಲಿ 180 ಎಂ ಎಲ್ ಅಳತೆಯ ಹನಿಗ್ರೇಡ ಬ್ರ್ಯಾಂಡಿ ಇದ್ದಿದ್ದು, ಅಲ್ಲದೇ ಕಾರಿನ ಡಿಕ್ಕಿಯಲ್ಲಿ 180 ಎಂ ಎಲ್ ಅಳತೆಯ 400

ಹನಿಗ್ರೇಡ ಬ್ರ್ಯಾಂಡಿ ಇದ್ದು ,  ಸದ್ರಿ  ಮದ್ಯವನ್ನು ಸಾಗಾಟ ಮಾಡಲು ಯಾವುದೇ ಪಾಸ್ ಯಾ ಪರ್ಮಿಟ್ ಇಲ್ಲ ಎಂದು ತಿಳಿಸಿದ್ದು,  ಅವುಗಳ ಮೇಲೆ  for sale in Goa only ಎಂದು ನಮೂದು ಮಾಡಲಾಗಿತ್ತು. ಸದ್ರಿ ಎಲ್ಲಾ ಬಾಟಲಿಗಳನ್ನು ನಾನು ಜಪ್ತುಪಡಿಸಿದ್ದು , ಆ ಪೈಕಿ 24 ಬಾಟಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಾಯ್ದಿರಿಸಿ ಪಂಚರ ಸಮಕ್ಷಮ  ವಿವರವಾದ ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ  ರಾತ್ರಿ 9.45 ರಿಂದ 11.30 ರ ನಡುವಿನ ಅವಧಿಯಲ್ಲಿ ತಯಾರಿಸಲಾಯಿತು.  ಸಮಯದ ಅಭಾವ ಇದ್ದುದರಿಂದ ಘಟನಾ ಸ್ಥಳದಲ್ಲೇ ಮೇಲಾಧಿಕಾರಿಗಳ ಅನುಮತಿಯನ್ನು ಪಡೆದು ಶೋಧನಾ ಸಮ್ಮುಚಿತ ವಾರಂಟನ್ನು ತಯಾರಿಸಿರುತ್ತೇನೆ.  ನಂತರ ಆರೋಪಿತರುಗಳನ್ನು ದಸ್ತಗಿರಿ ಮಾಡಿ ಅಬಕಾರಿ ಠಾಣೆಗೆ ಕರೆದುಕೊಂಡು ಹೋಗಿ ಸರಕಾರಿ ತರ್ಫೆ ಫಿರ್ಯಾದನ್ನು ದಾಖಲಿಸಿ , ಪ್ರ ವ ವರದಿಯನ್ನು ತಯಾರಿಸಿ ಸೂಕ್ತ ಬೆಂಗಾವಲಿನೊಂದಿಗೆ ಆರೋಪಿತರನ್ನು ಹಾಗೂ ಪ್ರ ವ ವರದಿ ಮತ್ತು ದೂರಿನೊಂದಿಗೆ ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುತ್ತೇನೆ.

**(ಮುದ್ದೆ ಮಾಲುಗಳು ನ್ಯಾಯಾಲಯದಲ್ಲಿ ಹಾಜರು ಪಡಿಸದೇ ಇದ್ದುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).**

**ಓ. ಹೇ.ಕೇ. ಸರಿ ಇದೆ.**

**ಪ್ರ.ದ.ನ್ಯಾದಂ. ಕಾರವಾರ**

ಸಾಕ್ಷಿಯು ಶೋಧನಾ ಸಮ್ಮುಚಿತ ವಾರಂಟ್ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು ನಿಪಿ-1(ಎ) ಎಂದು , ಸಾಕ್ಷಿಯು ಪಂಚನಾಮೆ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು ನಿಪಿ-2(ಬಿ) ಎಂದು , ಸಾಕ್ಷಿಯು ಮಾದರಿ ಸೀಲು ಪತ್ರ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಮಾಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುಮಾ-1 ರಿಂದ 15 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಗಳನ್ನು ಮುಮಾ-1(ಬಿ) ರಿಂದ 15(ಬಿ) ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಇಂದು ನ್ಯಾಯಾಲಯದಲ್ಲಿ ಗೈರುಹಾಜರಿದ್ದು , ಆತನ ಗುರುತಿಸುವಿಕೆಗೆ ತಮ್ಮ ತಕರಾರು ಇಲ್ಲಾ ಎಂದು ನುಡಿದಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಪಿ ಜಿ ಪಿ ಆರೋಪಿ ಪರ ವಕೀಲರಿಂದ</u>**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ . ಘಟನ ದಿನದಂದು ಬೆಳಿಗ್ಗೆ 6-00 ಗಂಟೆಗೆ ನನ್ನ ಕರ್ತವ್ಯ ಪ್ರಾರಂಭವಾಗಿರುತ್ತದೆ .ನಾನು ರೈಲು ಹಾಗೂ ಪ್ಲಾಟ್ ಫಾರಂ ಅನ್ನು ತಪಾಸಣೆ ಮಾಡುವ ಕರ್ತವ್ಯದಲ್ಲಿ ನಿರತನಾಗಿರುತ್ತೇನೆ . ನಮಗೇನಾದರು ಅನಧಿಕೃತ ವಸ್ತುಗಳು ಪತ್ತೆಯಾದರೆ ಆ ಸಮಯದಲ್ಲಿ ನಾವು ನಮ್ಮ ಮೇಲಾಧಿಕಾರಿಗಳಿಗೆ ದೂರನ್ನು ನೀಡುತ್ತೇವೆ ಎಂದರೆ ಸರಿ . ಪಂಚನಾಮೆಗೆ ಸಾಕ್ಷಿದಾರರಾಗಿ ಸಹಿಯನ್ನು ಮಾಡಲು ನನ್ನ ಇಲಾಖೆಯ ಅನುಮತಿಯನ್ನು ಪಡೆದಿರುವುದಿಲ್ಲ . ಘಟನಾ ದಿನದಂದು ಕರ್ತವ್ಯದಲ್ಲಿದ್ದೆ ಎಂದು ಹೇಳಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ . ರೇಲ್ವೆ ನಿಲ್ದಾಣದಲ್ಲಿ ಅನೇಕ ಮಂದಿಯ ಓಡಾಟ ಇರುತ್ತದೆ ಎಂದರೆ ಸರಿ . ಅಲ್ಲಿ ಅಂಗಡಿ ಮುಂಗಟ್ಟುಗಳು ಇರುತ್ತದೆ ಎಂದರೆ ಸರಿ . ಚಾಸಾ-1 ರವರು ಯಾವುದೇ ಸ್ವತಂತ್ರ ಪಂಚರನ್ನು ಪಂಚನಾಮಗೆ ಕರೆದಿರುವುದಿಲ್ಲ . ಆರೋಪಿತನಿಂದ ಯಾವುದೇ ರೇಲ್ವೆ ಟಿಕೆಟ್ ಅನ್ನು ಪಡೆದಿರುವುದಿಲ್ಲ .

ಆ ದಿನ ಯಾವುದೇ ದಾಳಿ ಮಾಡಿರುವುದಿಲ್ಲ , ಆರೋಪಿತನಿಂದ ಯಾವುದೇ ಅಬಕಾರಿ ಸವತ್ತುಗಳನ್ನು ಜಪ್ತು ಪಡಿಸಿರುವುದಿಲ್ಲ, ಯಾವುದೇ ಪಂಚನಾಮೆಯನ್ನು ತಯಾರಿಸಿರುವುದಿಲ್ಲಾ, ಪೋಲಿಸರ ಕೋರಿಕೆಯ ಮೇರೆಗೆ ನಾನು ನಿಪಿ-2 ದಾಖಲೆಗೆ ಸಹಿಯನ್ನು ಮಾಡಿದ್ದು , ನನ್ನ ಸಮಕ್ಷಮ

ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–2 ನ್ನು ಠಾಣೆಯಲ್ಲಿ ಬರೆಯಲಾಗಿದೆ ಎಂದರೆ ಸರಿ . ಮು ಮಾ ಗಳಿಗೂ ಆರೋಪಿಗೂ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಅಬಕಾರಿ ಪೋಲಿಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).**

**ಓ. ಹೇ.ಕೇ. ಸರಿ ಇದೆ.**

**ಪ್ರ.ದ.ನ್ಯಾದಂ. ಕಾರವಾರ**